# ಕರ್ನಾಟಕ ಸರ್ಕಾರ
# ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ

ದೂರವಾಣಿ: 22352579

ರಾಜಮ್ಮ ಎ. ಚೌಡಾರೆಡ್ಡಿ
ನಿರ್ದೇಶಕರು(ಪ್ರ)
ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕೊಠಡಿ ಸಂ.126, 1ನೇ ಮಹಡಿ, ವಿಕಾಸ ಸೌಧ, ಬೆಂಗಳೂರು-1

ಪತ್ರ ಸಂಖ್ಯೆ: KSA-12015/17/2019 HRS                                                              ದಿನಾಂಕ: 07-11-2020

ರವರಿಗೆ:
ಕುಲಸಚಿವರು/ಇತಿಹಾಸ ವಿಭಾಗ ಮುಖ್ಯಸ್ಥರುಗಳಿಗೆ:

1. ಮೈಸೂರು ವಿಶ್ವವಿದ್ಯಾಲಯ, ಮೈಸೂರು.
2. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
3. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,
4. ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.
5. ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.
6. ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.
7. ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ.
8. ಶಿವಮೊಗ್ಗ ವಿಶ್ವವಿದ್ಯಾಲಯ, ಶಿವಮೊಗ್ಗ.
9. ತುಮಕೂರು ವಿಶ್ವವಿದ್ಯಾಲಯ, ತುಮಕೂರು.
10. ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಮಾನ್ಯರೇ,

ವಿಷಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವದ್ಯಾರ್ಥಿಗಳಿಗೆ ವಿಚಾರ ಸಂಕಿರಣ/ಕಾರ್ಯಾಗಾರ ಏರ್ಪಡಿಸುವ ಕಾರ್ಯಕ್ರಮಕ್ಕಾಗಿ. SCSP/TSP ಯೋಜನೆಯಡಿ ಅನುದಾನ ನೀಡುವ ಕುರಿತು.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಅಭಿವೃದ್ಧಿ ದೃಷ್ಠಿಯಿಂದ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇದಕ್ಕಾಗಿ 2020-21ನೇ ಸಾಲಿನ SCSP/TSP ಕ್ರಿಯಾ ಯೋಜನೆಯಡಿ, ಅನುದಾನವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಅದರಂತೆ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಾಗಾರ/ವಿಚಾರ ಸಂಕಿರಣವನ್ನು ಏರ್ಪಡಿಸುವ ಕಾರ್ಯಕ್ರಮಕ್ಕಾಗಿ ಇಲಾಖೆಯಿಂದ ಸಹಾಯ ಧನ ಪಡೆಯಲಿಚ್ಛಿಸುವ ವಿಶ್ವವಿದ್ಯಾನಿಲಯಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

**ಪ್ರಸ್ತಾವನೆಗಳ ಸ್ವೀಕೃತಿ :-**

ರಾಜ್ಯದ ವಿಶ್ವವಿದ್ಯಾನಿಲಯಗಳ ಕುಲಸಚಿವರಿಗೆ/ವಿವಿಧ ಅಧ್ಯಯನ ವಿಭಾಗಗಳ ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಕನಿಷ್ಠ ಮೂರು ದಿನಗಳ ಕಾಳ ಸಂಶೋಧನಾ ವಿಧಿ ವಿಧಾನಗಳ ಕುರಿತು ಕಾರ್ಯಾಗಾರ ಏರ್ಪಡಿಸಲು ಮೈಸೂರು ವಿಭಾಗದ ಜಿಲ್ಲೆಗಳ ವಿಶ್ವವಿದ್ಯಾನಿಲಯಗಳಿಂದ ಬರುವ ಪ್ರಸ್ತಾವನೆಗಳನ್ನು, ಮೈಸೂರು ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು, ಬೆಳಗಾವಿ ವಿಭಾಗದ ಜಿಲ್ಲೆಗಳಿಂದ ಬರುವ ಪಸ್ತಾವನೆಗಳನ್ನು ಪ್ರಾದೇಶಿಕ ಪತ್ರಾಗಾರ ಕಛೇರಿ,

18983 50
9/11/2020

ರವಾನಿಸಿದೆ 9/11/2020

P.T.O.

ಧಾರವಾಡ, ಹಾಗೂ ಬೆಂಗಳೂರು ಮತ್ತು ಕಲಬುರ್ಗಿ ವಿಭಾಗದ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಯಾದ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕೊಠಡಿ ಸಂ:126, ವಿಕಾಸ ಸೌಧ ಬೆಂಗಳೂರು-1, ಇಲ್ಲಿ ಸ್ವೀಕರಿಸಲಾಗುವುದು.

| ಕಾರ್ಯಾಗಾರ-ವಿಚಾರ ಸಂಕಿರಣ ಕಾರ್ಯಕ್ರಮ | | | |
|---|---|---|---|
| ಕ್ರಮ ಸಂ: | ಕಾರ್ಯಕ್ರಮ | ಬಿಡುಗಡೆ ಮಾಡುವ ಅನುದಾನ | ಷರಾ |
| 1. | ಪರಿಶಿಷ್ಟ ಜಾತಿಯ ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಕಾರ್ಯಾಗಾರ - ವಿಚಾರ ಸಂಕಿರಣವನ್ನು ಏರ್ಪಡಿಸುವುದು | ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಒಂದು ಕಾರ್ಯಕ್ರಮಕ್ಕೆ ರೂ.80,000/- | ಪರಿಶಿಷ್ಟ ಜಾತಿಯ ಕನಿಷ್ಠ 50 ವಿದ್ಯಾರ್ಥಿಗಳಿಗಳಿಗೆ ಮೂರು ದಿನಗಳ ಕಾಲದ ವಿಚಾರ ಸಂಕಿರಣವನ್ನು ವಿಶ್ವವಿದ್ಯಾಲಯಗಳಲ್ಲಿ ಆಯೋಜಿಸುವುದು. |
| 2. | ಪರಿಶಿಷ್ಟ ಪಂಗಡದ ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಕಾರ್ಯಾಗಾರ - ವಿಚಾರ ಸಂಕಿರಣವನ್ನು ಏರ್ಪಡಿಸುವುದು | ವಿಶ್ವವಿದ್ಯಾಲಯದಲ್ಲಿ ಮೂರು ದಿನಗಳ ಒಂದು ಕಾರ್ಯಕ್ರಮಕ್ಕೆ ರೂ.75,000/- | ಪರಿಶಿಷ್ಟ ಪಂಗಡದ ಕನಿಷ್ಠ 50 ವಿದ್ಯಾರ್ಥಿಗಳಿಗಳಿಗೆ ಮೂರು ದಿನಗಳ ಕಾಲದ ವಿಚಾರ ಸಂಕಿರಣವನ್ನು ವಿಶ್ವವಿದ್ಯಾಲಯಗಳಲ್ಲಿ ಆಯೋಜಿಸುವುದು. |

**ಆಯ್ಕೆ ವಿಧಾನ :-**

ಸ್ವೀಕೃತ ಪ್ರಸ್ತಾವನೆ/ಅರ್ಜಿಗಳ ಆಯ್ಕೆಯನ್ನು ವಿಭಾಗವಾರು ವಿಂಗಡಣೆ ಮಾಡಿ, ಪ್ರಸ್ತಾವನೆಯಲ್ಲಿನ ಕಾರ್ಯಕ್ರಮದ ವಿಷಯಕ್ಕೆ ಮಹತ್ವ ನೀಡಲಾಗುವುದು. ಚರಿತ್ರೆ ವಿಭಾಗಕ್ಕೆ ಮೊದಲ ಪ್ರಾಶಸ್ತ್ಯ. ಜೊತೆಗೆ ಮಾನವಿಕ ವಿಜ್ಞಾನಗಳ ವಿಭಾಗಗಳ ಪ್ರಸ್ತಾವನೆಯನ್ನು ಆಧ್ಯತೆಯ ಮೇಲೆ ಪರಿಗಣಿಸಲಾಗುವುದು.

**ಷರತ್ತುಗಳು:-**

1. ಒಂದು ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಪಡೆಯಲು ಒಮ್ಮೆ ಮಾತ್ರ ಅವಕಾಶವಿರುತ್ತದೆ. ಕಳೆದ ಸಾಲಿನಲ್ಲಿ ಅನುದಾನ ಪಡೆದ ವಿಶ್ವವಿದ್ಯಾಲಯದ ಅಧ್ಯಯನ ವಿಭಾಗಕ್ಕೆ ಸದರಿ ಸಾಲಿನಲ್ಲಿ ಆಯ್ಕೆಗೆ ಅವಕಾಶವಿರುವುದಿಲ್ಲ.
2. ಮಹಿಳಾ ವಿಭಾಗ/ಮಹಿಳಾ ಕಾಲೇಜುಗಳ ಪ್ರಸ್ತಾವನೆಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.
3. ಸಂಶೋಧನಾ ಕ್ಷೇತ್ರದಲ್ಲಿ ಅನುಭವ ಇರುವ ನುರಿತ ಪ್ರಾಧ್ಯಾಪಕರು/ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲು ಅವಕಾಶ ಮಾಡಿಕೊಡಲಾಗುವುದು.
4. ಪರಿಶಿಷ್ಟ ಜಾತಿ ಕಾರ್ಯಕ್ರಮ ಆಗಿದ್ದಲ್ಲಿ ಪರಿಶಿಷ್ಟ ಜಾತಿಯ ಕನಿಷ್ಠ 50 ಅಥವಾ ಅದಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮವಾಗಿದ್ದಲ್ಲಿ ಕನಿಷ್ಠ 45 ಅಥವಾ ಅದಕ್ಕಿಂತ ಹೆಚ್ಚು ಗಿರಿಜನ ವಿದ್ಯಾರ್ಥಿಗಳು ಭಾಗವಹಿಸಬೇಕು.

5. ಪರಿಶಿಷ್ಟ ಜಾತಿ ಮತ್ತು ಗಿರಿಜನ ಸಂಶೋಧನಾ ವಿದ್ಯಾರ್ಥಿಗಳಿಗೆ ಕನಿಷ್ಠ ಮೂರು ದಿನಗಳ ಕಾಲ ಸಂಶೋಧನಾ ವಿಧಿ ವಿಧಾನಗಳು ಹಾಗೂ ಐತಿಹಾಸಿಕ ದಾಖಲೆಗಳ ಮಹತ್ವ ಕುರಿತು ಕಾರ್ಯಾಗಾರ ಏರ್ಪಡಿಸುವುದು.
6. ಕಾರ್ಯಕ್ರಮ ಮುಗಿದ ಒಂದು ವಾರದೊಳಗೆ ಭಾಗವಹಿಸಿದ ವಿದ್ಯಾರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳ ಹಾಜರಾತಿ ಹಾಗೂ ಕಾರ್ಯಕ್ರಮದ ಅಭಿಪ್ರಾಯ ಸೇರಿದಂತೆ ಪೂರ್ಣ ವರದಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
7. ಕಾರ್ಯಕ್ರಮ ಮುಗಿದ ಒಂದು ವಾರದೊಳಗೆ ವೆಚ್ಚದ ಮೊತ್ತಕ್ಕೆ ದೃಢೀಕೃತ ಮೂಲ ರಸೀದಿಗಳೊಂದಿಗೆ ಉಪಯುಕ್ತತಾ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.
8. ಪ್ರತಿ ಕಾರ್ಯಾಗಾರ ಮತ್ತು ವಿಚಾರ ಸಂಕಿರಣ ಕಾರ್ಯಕ್ರಮಗಳ ಎಲ್ಲಾ ವಿವರಗಳನ್ನು ಪತ್ರಾಗಾರ ನಿರ್ದೇಶನಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
9. ಕಾರ್ಯಕ್ರಮ ಆಯೋಜಿಸುವವರು ಸದರಿ ಕಾರ್ಯಕ್ರಮಕ್ಕೆ ಸರ್ಕಾರದ ಇನ್ನಿತರೆ ಯಾವುದೇ ಯೋಜನೆಗಳಿಂದ ಅನುದಾನ ಪಡೆದಿರುವುದಲ್ಲವೆಂದು ದೃಢೀಕರಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು.
10. ಕಾರ್ಯಕ್ರಮದ ಷರತ್ತುಗಳಿಗೆ ಒಪ್ಪಿ, ಒಪ್ಪಿಗೆ ಪತ್ರ ನೀಡದಲ್ಲಿ ಮಾತ್ರ ಸಂಸ್ಥೆಯ ಖಾತೆಗೆ ಹಣ ಜಮಾ ಮಾಡಲಾಗುವುದು. ( ಬ್ಯಾಂಕ್ ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ.ಕೋಡ್ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ ಮತ್ತು ಬ್ಯಾಂಕಿನ ವಿಳಾಸ ಹಾಗೂ FORM -09ನ್ನು ಲಗತ್ತಿಸುವುದು).

ಈ ಮೇಲ್ಕಂಡ ಎಲ್ಲಾ ವಿವರ – ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆ ಸಲ್ಲಿಸಲು ಕೋರಲಾಗಿದೆ.

ತಮ್ಮ ನಂಬುಗೆಯ

ನಿರ್ದೇಶಕರು (ಪ್ರ),
ಕರ್ನಾಟಕ ರಾಜ್ಯ ಪತ್ರಾಗಾರ
7/11/2020.

9/11/2020
ರವಾನಿಸಿದೆ

O/C.